## ಹಿರಿಯ ಶ್ರೇಣಿಯ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

### ಸಿಸಿಃ 710/2021

ಫಿರ್ಯಾಧಿದಾರಃ ಕರ್ನಾಟಕ ರಾಜ್ಯ ಇವರ ಪರವಾಗಿ
ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ

1. ಗಿರೀಶ ತಂದೆ ಸಿದ್ದಪ್ಪ, ಸುಮಾರು 30 ವರ್ಷ, ಉದ್ಯೋಗಃ ಚಾಲಕ, ವಾಸಃ ದುಮ್ಮಿ ಗ್ರಾಮ, ಹೊಳಲ್ಕೆರೆ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.
2. ಜೀವನ್ ತಂದೆ ಶಿವಕುಮಾರ, ಸುಮಾರು 27 ವರ್ಷ, ಉದ್ಯೋಗಃ ಕೆಎ–51–ಎಂಎಲ್–7603 ನೇ ಓಮಿನಿ ಚಾಲಕ, ವಾಸಃ ರಾಮಘಟ್ಟ ಗ್ರಾಮ, ಹೊಳಲ್ಕೆರೆ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.
3. ಸುಭಾನ್ ತಂದೆ ಫಜಲುಲ್ಲಾ ಖಾನ್, ಸುಮಾರು 30 ವರ್ಷ, ಉದ್ಯೋಗಃ ಕೆ-16-ಜಿ-591 ನೇ ಅಂಬುಲೆನ್ಸ್ ವಾಹನದ ಚಾಲಕ, ಹೆಚ್ ಡಿ ಪುರ ಗ್ರಾಮ ಹೊಳಲ್ಕೆರೆ ತಾಲ್ಲೂಕು, ಸ್ವಂತ ಊರುಃ ಜೆ ಎನ್ ಕೋಟೆ, ಚಿತ್ರದುರ್ಗ ತಾಲ್ಲೂಕು.
4. ಡಿ.ಎಂ. ಸಂತೋಷ ತಂದೆ ಮಂಜಪ್ಪ, ಸುಮಾರು 34 ವರ್ಷ, ಉದ್ಯೋಗಃ ಹೊಳಲ್ಕೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಲ್ಯಾಬ್ ಟೆಕ್ನೀಷಿಯನ್, ವಾಸಃ ದುಮ್ಮಿ ಗ್ರಾಮ, ಹೊಳಲ್ಕೆರೆ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.
5. ಟಿ.ಇ. ನರಸಿಂಹರಾಜು @ ರಾಜು ತಂದೆ ತಿಪ್ಪೇಸ್ವಾಮಿ, ಸುಮಾರು 33 ವರ್ಷ, ಉದ್ಯೋಗಃವೈನ್ಸ್ ಶಾಪ್ ಮಾಲೀಕರು, ವಾಸಃದುಮ್ಮಿ ಗ್ರಾಮ, ಹೊಳಲ್ಕೆರೆ ತಾಲ್ಲೂಕ್, ಚಿತ್ರದುರ್ಗ ಜಿಲ್ಲೆ.

### -ಃ ದೋಷಾರೋಪಣೆ ಃ-

**ಶ್ರೀ ಸರವಣನ್ ಎಸ್, ಬಿ.ಬಿ.ಎಂ. ಎಲ್.ಎಲ್.ಬಿ. ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-**

ದಿನಾಂಕ 21-04-2020 ರಂದು ಬೆಳಗಿನ ಜಾವ 05.00 ಗಂಟೆ ಸಮಯದಲ್ಲಿ ಹೊಳಲ್ಕೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಶಿವಗಂಗ ಗ್ರಾಮದ ಬಳಿ ಚಾಸಾಃ1 ರವರು ಚಾಸಾಃ5 ಹಾಗೂ ಚಾಸಾಃ6 ರವರ ಸಂಗಡ ಗಸ್ತಿನಲ್ಲಿರುವಾಗ 5 ನೇ ಆರೋಪಿಯಾದ ನೀವು ಚಳ್ಳಕೆರೆ ತಾಲ್ಲೂಕ್ ದೊಡ್ಡ ಉಳ್ಳಾರ್ತಿ ಗ್ರಾಮದಿಂದ ಕೆಎ-16-ಜಿ-591 ನೇ ಸರ್ಕಾರಿ ಅಂಬುಲೆನ್ಸ್ ನಲ್ಲಿ ಮದ್ಯ ತುಂಬಿರುವ ಬಾಕ್ಸ್ ಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಇಟ್ಟಿದ್ದು ಅವುಗಳನ್ನು 3 ಮತ್ತು 4 ನೇ ಆರೋಪಿತರಾದ ನೀವು ಅಕ್ರಮವಾಗಿ ಸಾಗಾಣಿಕೆ ಮಾಡಿಕೊಂಡು ಹೊಳಲ್ಕೆರೆ ತಾಲ್ಲೂಕು ಶಿವಗಂಗ ಗ್ರಾಮದ ಬಳಿ ಬಂದು 1 ನೇ ಮತ್ತು 2 ನೇ ಆರೋಪಿತರಾದ ನೀವುಗಳು ಅದನ್ನು ತೆಗೆದುಕೊಂಡು ಬಂದಿದ್ದ ಕೆಎ-51-ಎಂ.ಎಲ್-7603 ನೇ ಒಮಿನಿ ವಾಹನದಲ್ಲಿ 1 ರಿಂದ 4 ನೇ ಆರೋಪಿತರಾದ ನೀವುಗಳು ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ32 ಮತ್ತು 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

2. ಮೇಲಿನ ಅಂಶ-1 ರಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ರಿಂದ 5 ನೇ ಆರೋಪಿತರಾದ ನೀವುಗಳು ಸರ್ಕಾರವು ಕೋವಿಡ್-19 ಪ್ರಯುಕ್ತ ಮಾಡಿರುವ ಲಾಕ್ ಡೌನ್ ಆದೇಶವನ್ನು ಉಲಂಘನೆ ಮಾಡಿರುತ್ತೀರಿ. ಆದ್ದರಿಂದ 1 ರಿಂದ 5 ನೇ ಆರೋಪಿತರಾದ ನೀವುಗಳು ಭಾರತೀಯ ದಂಡ ಸಂಹಿತೆ ಕಲಂ 269 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

3. ಮೇಲಿನ ಅಂಶ-1 ರಲ್ಲಿ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 3 ನೇ ಆರೋಪಿಯಾದ ನೀವು ಸರ್ಕಾರಿ ಸೇವಕನಾಗಿದ್ದು ತನಗೆ ವಹಿಸಿದ್ದ ಕೆಎ-16-ಜಿ-591 ನೇ ಸರ್ಕಾರಿ ಅಂಬುಲೆನ್ಸ್ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಅಪರಾಧಿಕ ನಂಬಿಕೆ ದ್ರೋಹ ಮಾಡಿರುತ್ತೀರಿ. ಆದ್ದರಿಂದ 3 ನೇ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 408 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ.

ಮೇಲ್ಕಂಡ 1 ರಿಂದ 5 ನೇ ಆರೋಪಿತರಾದ ನೀವುಗಳು ಮೇಲ್ಕಂಡ ಆರೋಪಗಳನ್ನು ನನ್ನ ಸಂಜ್ಞೆಯಡಿ ವಿಚಾರಣೆ ಎದುರಿಸಬೇಕು.

(ಶ್ರೀ ಸರವಣನ್ ಎಸ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ.

ದಿನಾಂಕಃ . .2022.